OS No.124/2024 PW-1

**<u>ದಿನಾಂಕ 16.10.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಎನ್ ಎಸ್ ವಕೀಲರಿಂದಃ</u>**

ನೊಂದಣಿಗಾಗಿ ದಾವಾ ಹಾಕಿರುತ್ತೇವೆ. ನನಗೆ ಪ್ರತಿವಾದಿ 2020 ರಿಂದ ಪರಿಚಯ. ನನ್ನ ಸ್ನೇಹಿತನ ಕಡೆಯಿಂದ ಪ್ರತಿವಾದಿ ಪರಿಚಯ. ಈ ದಾವಾ ವ್ಯವಹಾರ ಹೊರತು ಪಡಿಸಿ 2020 ರಲ್ಲಿ ನನಗೂ ಮತ್ತು ಪ್ರತಿವಾದಿಗೂ 3 ಲಕ್ಷಕ್ಕೆ ವ್ಯವಹಾರ ನಡೆದಿತ್ತು. ಈ ಬಗ್ಗೆ ಪ್ರತಿವಾದಿ ಯಾವುದೇ ದಾಖಲೆಯನ್ನು ನೀಡಿರಲಿಲ್ಲ. ನಾನು ಪ್ರತಿವಾದಿಯ ವಿರುದ್ದ ಬೆಂಗಳೂರು ನ್ಯಾಯಾಲಯದಲ್ಲಿ ಚೆಕ್ ಪ್ರಕರಣವನ್ನು ರೂಪಾಯಿ 15 ವರೆ ಲಕ್ಷಕ್ಕೆ ಹಾಕಿರುತ್ತೇನೆ.

ಸಾಲದ ಭದ್ರತೆಗಾಗಿ ನಾನು ಪ್ರತಿವಾದಿ ಕಡೆಯಿಂದ ಕರಾರು ಪತ್ರವನ್ನು ಬರೆಯಿಸಿಕೊಂಡಿರುತ್ತೇನೆಂದರೆ ಸುಳ್ಳು. ನಾನು ತೆರಿಗೆ ಪಾವತಿದಾರಳು. ನಾನು ಗೃಹಿಣಿ. ನನಗೆ ಆದಾಯದ ಮೂಲ ಇದೆ. ಪ್ರತಿವಾದಿಗೆ ಕೊಟ್ಟ 35 ಲಕ್ಷ ಹಣದ ಬಗ್ಗೆ ತೆರಿಗೆ ವರದಿಯಲ್ಲಿ ತಿಳಿಸಿಲ್ಲ. ಕ್ರಯದ ಕರಾರು ವ್ಯವಹಾರದ ಮಾತುಕತೆ ನಮ್ಮ ಮನೆಯಲ್ಲಿ ಆಯಿತು. ಆಗ ನನ್ನ ತಾಯಿ, ಜಯಲಕ್ಷ್ಮಿ, ಮತ್ತು ನನ್ನ ಮಕ್ಕಳು ಹಾಗೂ ನಾನು ಹಾಜರಿದ್ದೆವು. ಜನವರಿ 2023 ರಲ್ಲಿ ಮಾತುಕತೆಯಾಗಿತ್ತು. ನಾನು 35 ವರೆ ಲಕ್ಷ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. ಅದರ ಮುಖಬೆಲೆ 500 ರೂಪಾಯಿಯಾಗಿತ್ತು. ನನ್ನ ಬಳಿ ಈ ಹಣ ಇದ್ದ ಬಗ್ಗೆ ದಾಖಲೆಯನ್ನು ನೀಡಿರುತ್ತೇನೆ. ಈ ಹಣವನ್ನು ಬ್ಯಾಂಕ್ ಖಾತೆ ಮುಖಾಂತರ ಕೊಡಲು ತೊಂದರೆ ಇರಲಿಲ್ಲ. ಕರಾರು ನೊಂದಣಿ ಮಾಡಿಸಿಕೊಳ್ಳಲು ನನಗೆ ಪ್ರತಿವಾದಿಯ ಮೇಲೆ ತುಂಬಾ ನಂಬಿಕೆ ಇತ್ತು. ದಾವಾ ಆಸ್ತಿಯನ್ನು ನೋಡಿರುತ್ತೇನೆ. ಪ್ರತಿವಾದಿ ಬ್ಯಾಂಕ್ ಖಾತೆಯಿಂದ ನನ್ನ ಖಾತೆಗೆ ಹಣ ಬಂದಿದೆ ಎಂದರೆ ಸಾಕ್ಷಿಯು ಸ್ವಲ್ಪ ಸ್ವಲ್ಪ ಬಂದಿದೆ ಎಂದು ನುಡಿಯುತ್ತಾರೆ. ಈ ಬಗ್ಗೆ ದಾವೆಯಲ್ಲಿ ತಿಳಿಸಿರುತ್ತೇನೆ.

ಸಮಯಾವಕಾಶ ಕೋರಿದ್ದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಓ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.